




# ದೈತ್ಯ ಕ್ಯಾಮೆರಾ

ಮೂರನೇ ಕಣ್ಣು ಎಂದಾಕ್ಷಣ ನೆನಪಾಗುವ ವಸ್ತು ಎಂದರೆ ಕ್ಯಾಮೆರಾ. ಈಗ ಏನಿದ್ದರೂ ಪಾಕೆಟ್ ಕ್ಯಾಮೆರಾ, ಡಿಜಿಟಲ್ ಮಿನಿ ಕ್ಯಾಮೆರಾ, ಮೊಬೈಲ್ ನಲ್ಲಿನ ಕ್ಯಾಮೆರಾ ಜತೆಗೆ ಚಿಕ್ಕ ಕ್ಯಾಮೆರಾಗಳದ್ದೇ ಜಮಾನಾ.

ಆದರೆ ಕೆಲವೊಬ್ಬರು ಏನಾದರೂ ವೈಶಿಷ್ಟ್ಯಗಳಿಂದ ಕೂಡಿದ ಹೊಸತನಗಳ ಆವಿಷ್ಕಾರಗಳಲ್ಲಿಯೇ ಮಗ್ನರಾಗಿರುತ್ತಾರೆ. ಅಮೆರಿಕಾದ ಡೆನ್ನಿಸ್ ಮಾನಾರ್ಚೆ ಎಂಬ  ಛಾಯಾಗ್ರಾಹಕ ಪ್ರಪಂಚದಲ್ಲಿಯೇ ಅತೀ ದೊಡ್ಡದಾದ ಕ್ಯಾಮೆರಾ ತಯಾರಿಸಿದ್ದಾನೆ.

ಈತ ಸಿದ್ಧಪಡಿಸಿದ ಕ್ಯಾಮೆರಾ ಸೈಜ್ ನೋಡಿದರೆ ಅಚ್ಚರಿಯಾಗುತ್ತದೆ. ಈ ದೈತ್ಯ ಕ್ಯಾಮೆರಾದ ಉದ್ದ 1066 ಸೆಂ.ಮೀ.; ಅಗಲ 366 ಸೆಂ.ಮೀ. ಇದೆ. (ಅಂದರೆ ಉದ್ದ 35.5 ಅಡಿ, ಅಗಲ 12.2 ಅಡಿಗಳಷ್ಟಿದೆ.) ಕ್ಯಾಮೆರಾದ ಲೆನ್ಸ್ ಅಂದಾಜು ಒಂದೂವರೆ ಅಡಿಗಳಷ್ಟು ವ್ಯಾಸ ಹೊಂದಿದೆ. ಇನ್ನು ಕ್ಯಾಮೆರಾದಲ್ಲಿ ಹಾಕುವ ಫಿಲಂಗೆ ಎಂಟು ಅಡಿಗಳಷ್ಟು ಸ್ಥಳಾವಕಾಶವನ್ನು ಕಲ್ಪಿಸಿದ್ದಾನೆ.

ಈಗಾಗಲೇ ಅಮೆರಿಕಾ, ಚಿಕಾಗೋದಲ್ಲಿನ ಪ್ರಸಿದ್ಧ ವಸ್ತುಪ್ರದರ್ಶನ ಕೇಂದ್ರವಾಗಿರುವ ಮೂನ್ರೊಯಿನಲ್ಲಿ ಇದು ಪ್ರದರ್ಶನಗೊಂಡಿದೆ. ಕ್ಯಾಮೆರಾವನ್ನು ಪ್ರದರ್ಶನಕ್ಕಿಟ್ಟಾಗ ನೋಡುಗರು ಈ ಕ್ಯಾಮೆರಾ ಮುಂದೆ ನಿಂತು ಅವರವರ ಕ್ಯಾಮೆರಾಗಳಿಗೆ ಪೋಸು ಕೊಟ್ಟಿದ್ದೇ ಕೊಟ್ಟಿದ್ದು. ಕ್ಯಾಮೆರಾ ಕ್ಲಿಕ್ಕಿಸಿದ್ದೇ ಕ್ಲಿಕ್ಕಿಸಿದ್ದು. ಈ ಕ್ಯಾಮೆರಾಕ್ಕಾಗಿ ಸ್ಥಳೀಯ ಫ್ಯಾಬ್ರಿಕೇಟರ್ ಸಹಾಯದೊಂದಿಗೆ ಒಂದು ಟ್ರಾಲಿಯನ್ನೇ ನಿರ್ಮಿಸಿದ್ದಾನೆ ಡೆನ್ನಿಸ್.

■ ವಸಂತ ಮಾಲವಿ